8. (1) ವರದಿಯನ್ನೊಪ್ಪಿಸುವುದು :

ಅಧ್ಯಕ್ಷರು : ಶ್ರೀ ಬಿದನೂರು ಶ್ರೀ ಶೈಲಪ್ಪ, ಅಧ್ಯಕ್ಷರು, ಸದನ ಸಮಿತಿ ಯವರು ದಿನಾಂಕ: 7.2.2012 ರಂದು ನಡೆದ ವಿಧಾನಸಭೆ ಅಧಿವೇಶನದಲ್ಲಿ ಅಶ್ಲೀಲ ಚಿತ್ರಗಳನ್ನು ವೀಕ್ಷಿಸಲಾದ ಪ್ರಕರಣದ ಬಗ್ಗೆ ಸ್ವತಂತ್ರವಾಗಿ ತನಿಖೆ ನಡೆಸಲು ರಚಿತವಾದ ಸದನ ಸಮಿತಿಯ ವರದಿಯನ್ನೊಪ್ಪಿಸುವುದು.

ಶ್ರೀ ಶ್ರೀಶೈಲಪ್ಪ ಬಿದರೂರು : ಸನ್ಮಾನ್ಯ ಸಭಾಧ್ಯಕ್ಷರೆ, ದಿನಾಂಕ: 7.2.2012 ರಂದು ನಡೆದ ವಿಧಾನಸಭೆ ಅಧಿವೇಶನದಲ್ಲಿ ಅಶ್ಲೀಲ ಚಿತ್ರಗಳನ್ನು ವೀಕ್ಷಿಸಲಾದ ಪ್ರಕರಣದ ಬಗ್ಗೆ ಸ್ವತಂತ್ರವಾಗಿ ತನಿಖೆ ನಡೆಸಲು ರಚಿತವಾದ ಸದನ ಸಮಿತಿಯ ವರದಿಯನ್ನು ಸಮಿತಿಯ ಪರವಾಗಿ ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನು ಮಂಡಿಸಲಾಯಿತು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ತಾವು ವರದಿಯನ್ನು ಸದನದಲ್ಲಿ ಮಂಡಿಸಿದ್ದೀರಿ. ಈ ಬಗ್ಗೆ ಚರ್ಚೆ ಮಾಡಬೇಕಲ್ಲವೇ?

ಅಧ್ಯಕ್ಷರು : ಚರ್ಚೆ ಮಾಡಿ. ಈಗ ಒಂದು condition ಓದಿಬಿಡುತ್ತೇನೆ. Further ಏನು ಮಾಡಬೇಕೆಂಬುದನ್ನು ಸಭೆಗೆ ಬಿಟ್ಟಿದ್ದು.

ಶ್ರೀ ಸಿದ್ದರಾಮಯ್ಯ : ನೀವು ಈ ರೀತಿ ಕೊನೆ ದಿನ ಇಟ್ಟುಬಿಟ್ಟು ಹೀಗೆ ಮಾಡಿದರೆ ನಾವು ಏನು ಮಾಡುವುದು?

ಅಧ್ಯಕ್ಷರು : ಚರ್ಚೆಗೆ ಈಗಲೂ ಅವಕಾಶ ಇದೆ. ಚರ್ಚೆ ಮಾಡಬಾರದು ಎಂದು ನಾನು ಹೇಳುವುದಿಲ್ಲ. ಅಂದು ಆದೇಶ ಮಾಡುವಾಗ ಒಂದು ಕಂಡಿಷನ್ ಹಾಕಿದ್ದೆನು, ಅದನ್ನು ಈಗ ತೆಗೆಯುತ್ತೇನೆ.

"ನಾನು ದಿನಾಂಕ: 7.2.2012 ರಂದು ನಡೆದ ವಿಧಾನಸಭೆ ಅಧಿವೇಶ ನದಲ್ಲಿ ಮಾಜಿ ಸಚಿವರಾಗಿದ್ದ ಶ್ರೀ ಲಕ್ಷ್ಮಣ ಸವದಿ ಮತ್ತು ಶ್ರೀ ಸಿಸಿಪಾಟೀಲ್ ಅವರುಗಳು ಮೊಬೈಲ್ ಮೂಲಕ ಅಶ್ಲೀಲ ಚಿತ್ರಗಳನ್ನು ವೀಕ್ಷಿಸುತ್ತಿದ್ದರು ಎಂದು ಮತ್ತು ಆ ಘಟನೆಗೆ ಮಾಜಿ ಸಚಿವರಾಗಿದ್ದ ಶ್ರೀ ಕೃಷ್ಣ ಜಿ. ಪಾಲೇಮಾರ್‌ರವರು ಕಾರಣರೆಂದು ವಿದ್ಯುನ್ಮಾನ ಮಾಧ್ಯಮಗಳು ಬಿತ್ತರಿಸಿರುವ ಘಟನೆ ಕುರಿತಂತೆ ಪರಿಶೀಲನೆಗೆ ಸದನ ಸಮಿತಿಯನ್ನು ರಚಿಸುವ ಸಂದರ್ಭದಲ್ಲಿ ಶ್ರೀಯುತರುಗಳಿಗೆ ಸಮಿತಿಯು ತನ್ನ ವರದಿಯನ್ನು ಸಲ್ಲಿಸುವವರೆಗೆ ಸದನಕ್ಕೆ ಪ್ರವೇಶಿಸಲು ನಿರ್ಬಂಧಿಸಲಾಗಿತ್ತು. ಈ ದಿನ ಸದರಿ ವರದಿಯನ್ನು ಸದನದಲ್ಲಿ ಮಂಡಿಸಿರುವುದರಿಂದ ಸದರಿ ಮಾಜಿ ಸಚಿವರುಗಳಾದ ಶ್ರೀ ಲಕ್ಷ್ಮಣ ಸವದಿ ಮತ್ತು ಶ್ರೀ ಸಿಸಿ ಪಾಟೀಲ್ ಮತ್ತು ಶ್ರೀ ಕೃಷ್ಣ ಜಿ. ಪಾಲೇಮಾರ್ ಅವರುಗಳಿಗೆ

ವಿಧಿಸಿರುವ ನಿರ್ಬಂಧವನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ ಎಂದು ಈ ಮೂಲಕ ಸದನಕ್ಕೆ ತಿಳಿಯಪಡಿಸಲಾಗಿದೆ."

ಆ ರಿಪೋರ್ಟ್ ಮೇಲೆ ಏನು ಮಾಡಬೇಕೋ ಅದು ಸದನಕ್ಕೆ ಬಿಟ್ಟಿದ್ದು.

ಶ್ರೀ ಸಿದ್ದರಾಮಯ್ಯ : ಈ ವರದಿಯನ್ನು ನಾವು ನೋಡಲಿಕ್ಕಾಗಿಲ್ಲ. ನೀವು ನಮ್ಮನ್ನು ಒಂದು ರೀತಿ ಇಕ್ಕಟ್ಟಿನ ಪರಿಸ್ಥಿತಿಗೆ ತಂದು ಇಟ್ಟಿದ್ದೀರಿ. ಈಗ ಚರ್ಚೆ ಮಾಡುವ ಹಾಗಿಲ್ಲ. ಈ ವರದಿಯನ್ನು ಓದಿಕೊಂಡಿಲ್ಲ. ನೀವು ವರದಿಯನ್ನು ಮಂಡಿಸಿಬಿಟ್ಟಿರಿ, ಮಂಡನೆಯಾಗಿದೆ. ಅದರ ಮೇಲೆ ಚರ್ಚೆಯಾಗಬೇಕು.

ಅಧ್ಯಕ್ಷರು : ನಾನು ತೆಗೆಯುವುದಿಲ್ಲ. ನಾನು ಸದನಕ್ಕೆ ಬಿಟ್ಟಿದ್ದೇನೆ. ನಾನು ತೀರ್ಮಾನ ತೆಗೆದುಕೊಳ್ಳುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಸದನದಲ್ಲಿ ತೀರ್ಮಾನ ಮಾಡಬೇಕಾದರೆ ಈ ವರದಿಯ ಬಗ್ಗೆ ಚರ್ಚೆ ಆಗಬೇಕಲ್ಲವೇ? ಹಾಗೆಯೇ ಸದನದಲ್ಲಿ ತೀರ್ಮಾನ ಮಾಡಲಿಕ್ಕಾಗುತ್ತದೆಯೇ? ನಾನೇನು ತೀರ್ಮಾನ ಮಾಡುವುದಿಲ್ಲವೆಂದು ನೀವೇ ಹೇಳಿಬಿಟ್ಟರೆ ಹೇಗೆ?

ಅಧ್ಯಕ್ಷರು : Report ಮೇಲೆ further ಏನು ಮಾಡಬೇಕೆಂದು ಅಭಿಪ್ರಾಯ ಕೊಡಿ.

ಶ್ರೀ ಸಿದ್ದರಾಮಯ್ಯ : ಶ್ರೀ ಕೃಷ್ಣ ಪಾಲೇಮಾರ್ ನನಗೆ ಗೊತ್ತಿಲ್ಲ, ಅವರು ಇವರೆಲ್ಲರಿಗೂ ಕೊಟ್ಟಿರುವುದು. ಅವರ ಮೇಲೆ ಏನೂ ಕ್ರಮ ಇಲ್ಲ, ಅವರಿಗೆ exemption ಎಂದು ಬಿಟ್ಟರೆ. ಮೊಬೈಲ್ ಫೋನ್ ಯಾರದ್ದು? ಯಾರದ್ದು ಎಂದು ಪತ್ತೆ ಹಚ್ಚಿದ್ದಾರೆಯೇ? Who handed over the mobile phone?

ಅಧ್ಯಕ್ಷರು : Report ನಲ್ಲಿದೆ.

ಶ್ರೀ ಸಿದ್ದರಾಮಯ್ಯ : ನಾನು report ನೋಡಿಲ್ಲ. ಅದು ಪತ್ರಿಕೆಯಲ್ಲಿ ಬಂದಿದೆ. Who handed over the mobile phone? ಯಾರಿಗೆ ಸೇರಿದ್ದು ಅದು? ಯಾರು ಕೊಟ್ಟರು, ಏನು ನಡೆಯಿತು ಎನ್ನುವುದೆಲ್ಲಾ ಗೊತ್ತಾಗ ಬೇಕಲ್ಲ?

ಅಧ್ಯಕ್ಷರು : ಸದಸ್ಯರಿಗೆ ಕೊಡಿ. ಎಲ್ಲವನ್ನೂ ಇಲ್ಲಿಯೇ (ಪ್ರೆಸ್ ಗ್ಯಾಲರಿ) ಕೊಡುತ್ತಿದ್ದೀರಲ್ಲ?

ಶ್ರೀ ಸಿದ್ದರಾಮಯ್ಯ : ಮೂರು ದಿನದ ಹಿಂದೆಯೇ ಅಜೆಂಡಾದಲ್ಲಿ ಇದರ ಕುರಿತಾದ ಚರ್ಚೆ ಇತ್ತು. ಆಗಲಾದರೂ ಮಾಡಿಸಿದ್ದರೆ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರಬಹುದಾಗಿತ್ತು. ಈಗ ಕೊನೆಯಲ್ಲಿ ತಂದು ಇಟ್ಟಿದ್ದೀರಿ. ಇದರೊಳಗೆ ಏನೇನಿದೆಯೆಂದು ಗೊತ್ತಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಈ ವರದಿಯಲ್ಲಿ ಫೋಟೋಗಳೇ ಇಲ್ಲ.

ಶ್ರೀ ಸಿದ್ದರಾಮಯ್ಯ : ದಾಖಲಾತಿಗಳು ಏನೇನು ನೋಡಿದ್ದಾರೆ ನನಗೆ ಗೊತ್ತಿಲ್ಲ. ಇರಿ ಸ್ವಾಮಿ, ನಾನು ಮಾತನಾಡುವ ಮೊದಲೆ ಎದ್ದು ನಿಂತರೆ ಹೇಗೆ? ಅದಕ್ಕೆ ನಾನೇನು ಹೇಳುತ್ತೀನೆಂದರೆ ಚರ್ಚೆ ಆಗಬೇಕೆಂದರೆ, ಒಂದು ದಿನ ಸೋಮವಾರ ಇಟ್ಟುಕೊಳ್ಳೋಣ.

ಶ್ರೀ ಬಸವರಾಜ ಬೊಮ್ಮಾಯಿ : ಬಿಸಿನೆಸ್ ಇಲ್ಲ.

ಶ್ರೀ ಸಿದ್ದರಾಮಯ್ಯ : ಏಕೆ? ಬಿಸಿನೆಸ್ ಇಲ್ಲವೆಂದರೆ ಇದನ್ನೇ ಇಟ್ಟುಕೊಳ್ಳುವುದು, ಸಿ.ಎ.ಜಿ ರಿಪೋರ್ಟ್ ಇದೆ. ಅದು, ಇದೂ ಎಲ್ಲವನ್ನೂ ಇಟ್ಟುಕೊಂಡು ಚರ್ಚೆ ಮಾಡೋಣ. ಕೆಲವು ಬಿಲ್‌ಗಳನ್ನು ಮುಂದಕ್ಕೆ ಹಾಕಿದ್ದೀರಲ್ಲ? ಅದರ ಜೊತೆಗೆ ಸೋಮವಾರ ಇಟ್ಟುಕೊಳ್ಳೋಣ. ಆಗಬಹುದಾ ಅಧ್ಯಕ್ಷರೆ?

ಶ್ರೀ ಬಸವರಾಜ ಬೊಮ್ಮಾಯಿ : ಬಿ.ಎ.ಸಿ. ಯಲ್ಲಿ ತೀರ್ಮಾನವಾಗಿದೆ.

ಶ್ರೀ ಸಿದ್ದರಾಮಯ್ಯ : ಏನು ಬಿ.ಎ.ಸಿ.? He has got all the powers. BAC is not supreme. ಇವರಿಗೆ ಅಧಿಕಾರ ಇದೆ. He can extend one more day. ಅವರಿಗೆ extend ಮಾಡಲು ಅಧಿಕಾರವಿದೆ. He can extend it.

ಅಧ್ಯಕ್ಷರು : With the consent of both teams, ಸಭಾ ನಾಯಕರು, ತಾವು ಎಲ್ಲರೂ ಒಪ್ಪಿದರೆ ಮಾತ್ರ.

ಶ್ರೀ ಸಿದ್ದರಾಮಯ್ಯ : ಈಗಲೇ ಕರೆದು ಬಿಡಿ. ಒಂದು ತೀರ್ಮಾನ ಮಾಡಿ ಬಿಡೋಣ.

ಶ್ರೀ ಜಗದೀಶ್ ಶೆಟ್ಟರ್ : ಮತ್ತೆ ಒಂದು ಅಧಿವೇಶನ ಬರುತ್ತದೆಯಲ್ಲ?

ಅಧ್ಯಕ್ಷರು : ಮುಂದಿನ ಅಧಿವೇಶನದಲ್ಲಿ ಚರ್ಚೆ ಮಾಡೋಣ.

ಶ್ರೀ ಸಿದ್ದರಾಮಯ್ಯ : ಪಾಪ ಅಲ್ಲಿಯವರೆಗೆ ಅವರು ಇಲ್ಲಿಗೆ ಬರುವ ಹಾಗಿಲ್ಲವಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಅವರು ಬರಬಹುದು ಎಂದು ಸ್ಪೀಕರ್ ರವರು ruling ಕೊಟ್ಟಿದ್ದಾರೆ.

ಅಧ್ಯಕ್ಷರು : ನಾನು ಆದೇಶ ಮಾಡುವಾಗ ಹಾಗೆ ಮಾಡಿದ್ದು.

ಶ್ರೀ ಸಿದ್ದರಾಮಯ್ಯ : ಹಾಗೆಲ್ಲಾ ಆದೇಶ ಮಾಡುವುದಕ್ಕೆ ಬರುವುದಿಲ್ಲ. How can they come and attend?

ಅಧ್ಯಕ್ಷರು : ನಾನು ಮೊದಲು ಸದನ ಸಮಿತಿ ಮಾಡುವಾಗ ಈ ರಿಪೋರ್ಟ್ ಮಂಡನೆ ಆಗುವವರೆಗೆ ಅವರನ್ನು ಸದನಕ್ಕೆ .....

ಶ್ರೀ ಸಿದ್ದರಾಮಯ್ಯ : ಅದರ ಅರ್ಥ, ಸದನ ತೀರ್ಮಾನ ಕೊಡುವವರೆಗೆ ಎಂದು.

ಅಧ್ಯಕ್ಷರು : ಹಾಗಲ್ಲ. Report ತೆಗೆದು ನೋಡಿ. ಮಂಡನೆ ಆಗುವವರೆಗೆ ಎಂದಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : Blue film ನೋಡುವವರನ್ನು defend ಮಾಡಿಕೊಳ್ಳುತ್ತೀರೇನು?

(ಗೊಂದಲ)

ಶ್ರೀ ಆರ್. ಅಶೋಕ್ : ಇಲ್ಲವೆಂದು ಬಂದಿದೆಯಲ್ಲ ವರದಿಯಲ್ಲಿ.

ಶ್ರೀ ಸಿದ್ದರಾಮಯ್ಯ : You want to defend it or not? You want to defend it? ನೀವು ಹೀಗೆ ಮುಚ್ಚಿ ಹಾಕುವುದು. That is why we did not co-operate. ಅದಕ್ಕೆ ನಾವು ಬರಲಿಲ್ಲ. We did not attend because, we knew that, rush up ಮಾಡ್ತಾರೆ ಅಂತ.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಸಭಾಧ್ಯಕ್ಷರೆ, ಸಾಮಾನ್ಯವಾಗಿ ಯಾವುದಾದರೂ report place ಆದಾಗ ಸದನ ಸಮಿತಿಯಲ್ಲಿ ಮೊದಲು report place ಆಗುತ್ತದೆ. ಅದರ ಮೇಲೇನಾದರೂ ಚರ್ಚೆ ಆಗಬೇಕಾದರೆ ಮತ್ತೆ ಒಂದು ತಾವು ಅಥವಾ ಯಾರು ಬೇಡಿಕೆ ಇಡುತ್ತಾರೋ ಅವತ್ತು ಒಂದು ಚರ್ಚೆ ಮಾಡುವ ಅವಕಾಶವಿದೆ. ಈಗ ಮಂಡನೆಯಷ್ಟೆ ಆಗಿರುವುದು.

ಶ್ರೀ ಸಿದ್ದರಾಮಯ್ಯ : He has got residuary powers. Now only he can take up.

ಶ್ರೀ ಬಸವರಾಜ ಬೊಮ್ಮಾಯಿ : No. You have got all the powers to discuss any time. ನಿಮ್ಮ ಅಧಿಕಾರವಿದೆ. ಅದನ್ನು ನಾನು ಹೇಳುವುದಿಲ್ಲ. ಸಾಮಾನ್ಯವಾಗಿ ಮಂಡನೆ ಆಗುತ್ತದೆ. ಯಾವ ಸದಸ್ಯರೂ ಕೂಡ ಓದಿಲ್ಲ. ಮುಂದಿನ ಅಧಿವೇಶನದಲ್ಲಿ ಚರ್ಚೆ ಮಾಡಿ. ಅದಕ್ಕೆ ನಾವು ನಿರ್ಬಂಧ ಹಾಕುವುದಿಲ್ಲ.

SRI SIDDARAMAIAH : Once it is placed on the floor of the House, it becomes the property of the House.

SRI BASAVARAJ BOMMAI : Yes. Now it has become property of the House.

SRI SIDDARAMAIAH : Now you are the custodian of all these things. You have to say. You have to take a decision. You are supreme.

ಶ್ರೀ ಬಸವರಾಜ ಬೊಮ್ಮಾಯಿ : ಸರ್, ಹಿಂದಿನ ಉದಾಹರಣೆಗಳು ಇವೆ.

ಅಧ್ಯಕ್ಷರು : ನಾನು ಸದನಕ್ಕೆ ಬಿಡುತ್ತೇನೆಂದು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : ನಮ್ಮದು ಅರೋಪ ಏನೆಂದರೆ, ಅವತ್ತು ನಮಗೆ ಚರ್ಚಿಸಲು ಬಿಡಲಿಲ್ಲ. ನಾವು ಧರಣಿ ಮಾಡಿದೆವು. Assembly adjourn ಆಗಿ ಬಿಟ್ಟಿತು. ಈಗಲೂ ಚರ್ಚೆ ಮಾಡಲು ಆಗುವುದಿಲ್ಲವೆಂದರೆ ಹೇಗೆ? ಅಂದು unilateral decision ಆಯಿತು. That is my contention. ಅಂದಿನ decision was unilateral.

ಅಧ್ಯಕ್ಷರು : That is different.

ಶ್ರೀ ಸಿದ್ದರಾಮಯ್ಯ : Without hearing us, decision was taken.

ಅಧ್ಯಕ್ಷರು : ನೀವು ಹಿಯರಿಂಗ್ ಮಾಡುವುದಕ್ಕೆ ಅವಕಾಶ ಕೊಡಲಿಲ್ಲ. ಅದಕ್ಕೆ ನಾನೇನೂ ಮಾಡುವ ಹಾಗಿಲ್ಲ. ನೀವೇ ಧರಣಿ ಮಾಡಿದಿರಿ ನಾನೇನು ಮಾಡಲಿ?

ಶ್ರೀ ಸಿದ್ದರಾಮಯ್ಯ : No. ನೀವು ಕೊಡದೆ ಇದ್ದದ್ದಕ್ಕೆ ನಾವು ಧರಣಿ ಮಾಡಿದ್ದು. After you denied opportunity to us then only we

started dharna. Otherwise, ಸುಮ್ಮಸುಮ್ಮನೆ ಯಾರಾದರೂ ಧರಣಿ ಮಾಡುತ್ತಾರೆಯೇ? ಚರ್ಚೆ ಮಾಡಿ ಎಂದರೆ ಮಾಡದೇ ಹೋಗುತ್ತಿದ್ದೆವೇ?

ಅಧ್ಯಕ್ಷರು : ಹಾಗೇನಿಲ್ಲ. ನಿಮ್ಮೊಂದಿಗೆ ಈ ಕುರಿತು ನನ್ನ chamber ನಲ್ಲಿ 4 ಗಂಟೆ ಚರ್ಚೆ ಮಾಡಿದ್ದೇವೆ. ನಾನು ಎಲ್ಲವನ್ನೂ ಕೇಳಿದ್ದೇನೆ. ಕೇಳದೆ, ಮಾಡದೆ ಯಾವುದನ್ನೂ ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ : ಅವತ್ತು ಏನಾಯಿತು ಎಂದು ಎಲ್ಲವನ್ನೂ ಹೇಳಲಾ?

ಅಧ್ಯಕ್ಷರು : ಹೇಳಿ, ಅದಕ್ಕೇನಿಲ್ಲ.

ಶ್ರೀ ಸಿದ್ದರಾಮಯ್ಯ: ಅವರು ಕೇಳಿಕೊಂಡು ಬರುತ್ತೇನೆಂದು ಹೋದರು. ಅವರು ಒಪ್ಪುವುದಿಲ್ಲವೆಂದು ಬಂದರು. ನೀವು ಅವರು ಒಪ್ಪುವುದಿಲ್ಲ ಎಂದಿರಿ. ಈಗ ಚರ್ಚೆ ಮಾಡೋಣ ಎಂದು ನಾವು ಹೇಳಿದೆವು. That is what happened.

ಅಧ್ಯಕ್ಷರು : ನಾನು ಅವತ್ತು ಆದೇಶ ಮಾಡಿದ್ದು ಏನೆಂದರೆ, ಈ ಬಗ್ಗೆ ವಿಚಾರಣಾ ಸಮಿತಿಯು ತನ್ನ ವರದಿಯನ್ನು ನೀಡುವವರೆಗೆ ಇದರಲ್ಲಿ ಭಾಗಿಯಾಗಿರುವ ಮೇಲ್ಕಂಡ ಸದಸ್ಯರುಗಳು ಸದನದ ಕಲಾಪದಲ್ಲಿ ಭಾಗವಹಿಸಲು ನಿರ್ಬಂಧಿಸಲಾಗಿದೆಯೆಂದು ಕೊಟ್ಟಿರುವುದು.

ಶ್ರೀ ಸಿದ್ದರಾಮಯ್ಯ : ಯಾವುದೋ ಒಂದು ಕಮಿಟಿ ಮಾಡಿ ಅದರ ವರದಿಯನ್ನು ತೆಗೆದುಕೊಂಡು ಚರ್ಚೆಯಿಲ್ಲದೆ ಮುಚ್ಚಿಹಾಕಿಬಿಟ್ಟರೆ, ಈ ರಾಜ್ಯದ ಜನತೆಗೆ ತಪ್ಪು ಸಂದೇಶ ಹೋಗುತ್ತದೆ. ಇದನ್ನು ಇನ್ನೂ ಓದಿಲ್ಲ. ಇಲ್ಲಿ ಏನಿದೆಯೆಂದರೆ ಅವರಿಬ್ಬರಿಗೆ ಕ್ಲೀನ್ ಚಿಟ್ ಕೊಟ್ಟಿದೆ.

(ಗೊಂದಲ)

ಅಧ್ಯಕ್ಷರು : ಮುಚ್ಚಿ ಹಾಕುವ ಪ್ರಶ್ನೆಯೇ ಇಲ್ಲ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : Officially ಇದು ಈಗ ತಾನೇ ಬಂದಿದೆ. ಮಾಧ್ಯಮಕ್ಕೆ ಕೂಡ ಕೊಟ್ಟಿದೆ. ಮುಚ್ಚಿ ಹಾಕುವುದೇನಿದೆ. ಮಾಧ್ಯಮಕ್ಕೆ ಕೂಡ ಇದನ್ನು ಕೊಟ್ಟಿರುವುದರಿಂದ ಇದನ್ನು ಮುಚ್ಚಿ ಹಾಕುವ ಪ್ರಶ್ನೆಯೇ ಇಲ್ಲ. ಸದನ ಸಮಿತಿ report is a public document now. ಆದ್ದರಿಂದ ಸದನ ಸಮಿತಿಗಳು. . . . .

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇದರಲ್ಲಿ ಅದೇ ತಾನೆ ಇರುವುದು. ಇಬ್ಬರಿಗೆ ಕ್ಲೀನ್ ಚಿಟ್. ಇದು ಸರಿಯಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಮೂರು ಜನರನ್ನೂ ಸೇರಿಸಬೇಕಾಗಿತ್ತು. ಪಾಪ ಒಬ್ಬರನ್ನು ಬಲಿ ತೆಗೆದುಕೊಂಡಿದ್ದೀರಿ.

(ಗೊಂದಲ)

ಅಧ್ಯಕ್ಷರು : ನೀವು ಚರ್ಚೆ ಮಾಡಿ ಏನು ಶಿಕ್ಷೆ ಕೊಡಬೇಕೆಂದು ಹೇಳಿ, ನನ್ನದೇನಿಲ್ಲ.

ಶ್ರೀ ಸಿದ್ದರಾಮಯ್ಯ : ಚರ್ಚೆಯಾಗಬೇಕಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಪ್ರತಿಪಕ್ಷದ ನಾಯಕರೆ, ಅವತ್ತು ಏನಾಯಿತೆಂದರೆ ಒಂದು ಸಮಿತಿಯಾಯಿತು. ಸದನ ಸಮಿತಿಯಲ್ಲಿ ನಿಮ್ಮಲ್ಲೂ ಕೂಡ ಸದಸ್ಯರಾಗಬೇಕೆಂದು ಹೇಳಿದ್ದರು. Without participating in that Committee, without being participants, without giving your opinions, ಇಲ್ಲಿ ಬಂದು ಈ ರೀತಿ ಹೇಳುವುದು ಸರಿಯಿಲ್ಲ. ಸದನ ಸಮಿತಿ ಎನ್ನುವುದು well established system. ಯಾವುದೋ ಒಂದು ಕಾರಣಕ್ಕೆ ಸದನ ಸಮಿತಿಯನ್ನು ಮಾಡುವುದು. ಅದಕ್ಕೋಸ್ಕರ ಎಲ್ಲಾ ಪಕ್ಷದವರನ್ನು ಸೇರಿಸುವುದು. You had ample opportunity. ಅಲ್ಲಿ ಇದ್ದುಕೊಂಡು ಏನೇನು ತಪ್ಪಾಗಿದೆ, ಏನೇನು ಶಿಕ್ಷೆ ಕೊಡಬೇಕೆಂಬುದನ್ನು ಹೇಳಬಹುದಾಗಿತ್ತು. ಅಲ್ಲಿ participate ಮಾಡದೆ boycott ಮಾಡಿ ಇವತ್ತು ಬಂದು ಇಲ್ಲಿ ಮಾತನಾಡಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ : ಅಂದರೆ ನಾವು ಮಾತನಾಡಬಾರದೇ?

ಶ್ರೀ ಎಸ್. ಸುರೇಶ್ ಕುಮಾರ್ : ಮಾತನಾಡಿ.

ಶ್ರೀ ಸಿದ್ದರಾಮಯ್ಯ : ಹಾಗಾದರೆ, have we lost our right?

SRI S. SURESH KUMAR : No, you had opportunity.

ಶ್ರೀ ಸಿದ್ದರಾಮಯ್ಯ : What is this? ನಮ್ಮ ವಿರೋಧ ಇದ್ದುದ್ದು ಏಕೆಂದರೆ ಅಂಗೈ ಹುಣ್ಣಿಗೆ ಕನ್ನಡಿ ಏಕೆ? No.1- It is an offence under Indian Penal Vode. You are also an Advocate. It is an offence under the Cyber Act. ಅವರ ಮೇಲೆ case ಕೊಡಿ, complaint lodge

ಮಾಡಿ. ನೀವು ನಿಮ್ಮ ಕಾರ್ಯದರ್ಶಿಯವರ ಕೈಲಿ complaint lodge ಮಾಡಿಸಬೇಕಿತ್ತು. ಅದನ್ನು ಮಾಡಿಸಲಿಲ್ಲ. Criminal law was not put into operation.

ಅಧ್ಯಕ್ಷರು : ಅದು ಬರುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಏಕೆ ಬರುವುದಿಲ್ಲ?

ಅಧ್ಯಕ್ಷರು : It is not published. ಅವರು individual, ನೀವು ತೆಗೆದು ನೋಡಿ Section 293. I have gone through that section.

ಶ್ರೀ ಸಿದ್ದರಾಮಯ್ಯ : Published ಎಂದರೇನು? T.V ಯಲ್ಲಿ ಬಂದ ನಂತರ ಅದು Published ಅಲ್ವಾ?

ಅಧ್ಯಕ್ಷರು : It is for the third person. ಅದು ಹಾಗೆ ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು : You study the law.

ಶ್ರೀ ಸಿದ್ದರಾಮಯ್ಯ : What is the publication? Publication means to convey and convince the public. It is conveyed. ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೆ ಕುಡಿದಿಲ್ಲವೆಂದಾಗುತ್ತದಾ?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಇವೆಲ್ಲವನ್ನೂ ಗಮನಿಸಿ ಸದನ ಸಮಿತಿ report ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ : ಈ ರೀತಿಯ ಸಮಸ್ಯೆ ಯಾವತ್ತೂ ಕೂಡ ಕರ್ನಾಟಕದಲ್ಲಿ ಆಗಿರಲಿಲ್ಲ. ಇದೊಂದು ವಿಶೇಷವಾದ ಪ್ರಕರಣ. ಇಂತ ವಿಶೇಷವಾದ ಪ್ರಕರಣವನ್ನು ಚರ್ಚೆ ಮಾಡದೆ.

ಅಧ್ಯಕ್ಷರು : ನೀವು co-operate ಮಾಡುವುದಿಲ್ಲ. ನೀವು ಸದನ ಸಮಿತಿಗೆ ಬಂದಿದ್ದರೆ ಈ ಸಮಸ್ಯೆ ಇರುತ್ತಿರಲಿಲ್ಲ.

ಶ್ರೀ ಸಿದ್ದರಾಮಯ್ಯ : ಅದಕ್ಕೆ ಹೀಗೆ ಕೊಟ್ಟುಬಿಡುವುದಾ?

ಅಧ್ಯಕ್ಷರು : ಕೊಟ್ಟವರಿಗೆ ನಾನೇನು ಹೇಳುವುದಿಲ್ಲ. It is wrong ಎಂದು ಹೇಳುವುದಿಲ್ಲ. They have got every right.

ಶ್ರೀ ಸಿದ್ದರಾಮಯ್ಯ : I am not attributing any motive to anybody. But the report is not based on facts, not based on law.

ಶ್ರೀ ಜಗದೀಶ್ ಶೆಟ್ಟರ್ : ವರದಿ ಮಂಡನೆಯಾಗಿದೆ. ಮಾನ್ಯ ವಿರೋದ ಪಕ್ಷದ ನಾಯಕರು ಚರ್ಚೆ ಮಾಡುತ್ತೇನೆಂದು ಹೇಳಿದರು. ಚರ್ಚೆ ಮಾಡುವುದಕ್ಕೆ ನಿಮಗೆ ಅವಕಾಶವಿದೆ.

ಶ್ರೀ ಸಿದ್ದರಾಮಯ್ಯ : ಈಗ ಚರ್ಚೆ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್ : ನೋಡಿ ಸ್ಪೀಕರ್‌ರವರು permission ಕೊಡಬೇಕು, ಇನ್ನೂ ಅಜೆಂಡಾ ಇದ್ದಾವೆ. ಸದನ ಸಮಿತಿ ವರದಿ ಇವತ್ತು ಮಂಡನೆಯಾಗಿದೆ.

ಶ್ರೀ ಸಿದ್ದರಾಮಯ್ಯ : ಈಗ ಕೊಟ್ಟು ಈಗಲೇ ಮಾಡುವುದಕ್ಕಾಗುತ್ತದೆಯೇ?

ಶ್ರೀ ಜಗದೀಶ್ ಶೆಟ್ಟರ್ : Next session ನಲ್ಲಿ ಮಾಡಿ. ಇದೇನು ಕೊನೆ ಅಧಿವೇಶನವಲ್ಲ. ಜೂನ್‌ನಲ್ಲಿ, ಜುಲೈನಲ್ಲಿ ಅಧಿವೇಶನ ನಡೆಯುತ್ತದೆ. ಆ ಸಂದರ್ಭದಲ್ಲಿ ಮಾಡಿ.

ಶ್ರೀ ಆರ್. ಅಶೋಕ್ : Question Paper Leak ಆಗಿದೆ ಅಲ್ಲವೇ?

ಶ್ರೀ ಸಿದ್ದರಾಮಯ್ಯ : Everything is leaked in your Government, ಉದಾಸಿ ಅವರೇ, ನೀವು ಯಜಮಾನರು ಸುಮ್ಮನೆ ಕುಳಿತುಕೊಳ್ಳಿ. ಯಜಮಾನರಾಗಿ ನೀವು ಹೀಗೆಲ್ಲಾ ಮಾಡುವುದು ಸರಿಯಿಲ್ಲ.

ಶ್ರೀ ಸಿ.ಎಂ. ಉದಾಸಿ : ಜವಾಬ್ದಾರಿಯಿಂದ ಮಾತನಾಡಬೇಕು. ಸದನ ಸಮಿತಿ ಮಾಡಿದಾಗ ನಿಮ್ಮವರು ಅದರಲ್ಲಿ ಭಾಗಿಯಾಗದೇ, ಇವತ್ತು ಚರ್ಚೆ ಮಾಡುವುದರಲ್ಲಿ ಏನು ಅರ್ಥವಿದೆ? ಚರ್ಚೆ ಮಾಡುವುದಕ್ಕಿಂತ ಶಿಫಾರಸ್ಸುಗಳು ಏನಾಗಿದೆ ಎಂಬುದನ್ನು ನೋಡುವುದರಲ್ಲಿ ಅರ್ಥವಿದೆ.

ಶ್ರೀ ಸಿದ್ದರಾಮಯ್ಯ : ನಾನು ಜವಾಬ್ದಾರಿಯಂದಲೇ ಮಾತನಾಡುತ್ತಿರುವುದು . ಇದರ ಬಗ್ಗೆ ಚರ್ಚೆಯನ್ನೇ ಮಾಡಬಾರದೇ?

ಶ್ರೀ ಸಿ.ಎಂ. ಉದಾಸಿ : ನೀವು ಚರ್ಚೆ ಮಾಡಿ, ಬೇಡ ಎನ್ನುವುದಿಲ್ಲ.

ಶ್ರೀ ಸಿದ್ದರಾಮಯ್ಯ : What is your argument?

ಶ್ರೀ ಸಿ.ಎಂ. ಉದಾಸಿ : ಚರ್ಚೆ ಮಾಡಿ ತೀರ್ಮಾನ ಮಾಡಬೇಕೆಂಬುದು ನೀವು ಅಪೇಕ್ಷೆ ಪಟ್ಟರೆ ಮಾಡೋಣ. ಆದರೆ, ಈಗ ಶಿಫಾರಸ್ಸುಗಳನ್ನು ಮಾಡಿರುವುದರ ಮೇಲೆ ಅಂತಿಮ ತೀರ್ಮಾನ. ಈಗಲೇ ಚರ್ಚೆ ಮಾಡಿ ಮಾಡಬೇಕೆಂಬುದು ಸರಿಯಲ್ಲ.

ಶ್ರೀ ಸಿದ್ದರಾಮಯ್ಯ : ಈ ಚರ್ಚೆಯನ್ನು ಸೋಮವಾರ ಇಟ್ಟುಕೊಳ್ಳಿ ಮಾನ್ಯ ಅಧ್ಯಕ್ಷರೆ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ : ಅಲ್ಲ, ಇಲ್ಲಿ ಏನಾಗಿದೆ ಎಂದರೆ. . . . .

ಶ್ರೀ ಸಿದ್ದರಾಮಯ್ಯ : Take it on Monday. ಅವರನ್ನೇನು ಕೇಳುತ್ತೀರಾ? ನೀವು dicide ಮಾಡಿ.

ಶ್ರೀ ಸಿ.ಎಂ. ಉದಾಸಿ : ಕರ್ನಾಟಕ ವಿಧಾನಮಂಡಲದಲ್ಲಿ ಇದು ಮೊದಲಬಾರಿಗೆ ಈ ರೀತಿ ಆಗಿರುವುದರಿಂದ ಕೈ ಬಿಡಬಹುದು. ಅದಕ್ಕೆ ನೀವು ಒಪ್ಪಿಕೊಳ್ಳಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾನು ಇನ್ನೂ ಓದೇ ಇರುವುದಿಲ್ಲ. ವರದಿಯಲ್ಲಿ ಏನೇನು ಇದೆ? ಅದನ್ನು ಹೇಗೆ link ಕೊಟ್ಟಿದ್ದಾರೆ, ಹಾಗೆಯೇ evidenceನ್ನು ಹೇಗೆ ಕಲೆಕ್ಟ್ ಮಾಡಿದ್ದಾರೆ ಎಂಬುದನ್ನೂ ಸಹ ನೋಡಬೇಕಲ್ಲವೆ? ಶ್ರೀ ಶೈಲಪ್ಪ ಅವರೇ, ನಿಮ್ಮ ಮೇಲೆ ಏನೂ ಹೇಳುವುದಿಲ್ಲ. I am not attributing any motive to you, you are a good friend of mine, ನಿಮಗೆ ಬಹಳ ಇಕ್ಕಟ್ಟುಗಳಿರಬಹುದು ನಮಗೇನು ಗೊತ್ತಾಗುವುದಿಲ್ಲವೇ? ಮಾನ್ಯ ಅಧ್ಯಕ್ಷರೆ, you are the custodian of this House, you have to protect the diginity of this House, you have to uphold the diginity of this House. ಒಂದು ಸಾರಿ ಹೋದರೆ ಪುನಃ ಬರುತ್ತದೆಯೆ ಸ್ವಾಮಿ? ಸರ್ಕಾರವನ್ನು ಕೇಳಿ ತೀರ್ಮಾನ ಮಾಡಿ, ಸೋಮವಾರ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಉಮೇಶ್ ವಿ ಕತ್ತಿ (ಕೃಷಿ ಸಚಿವರು) : ಮುಖ್ಯಮಂತ್ರಿಯವರನ್ನು consult ಮಾಡಿ, ನಿಮ್ಮನ್ನು consult ಮಾಡಿ ತೀರ್ಮಾನ ತೆಗೆದುಕೊಳ್ಳಿ. ಅಲ್ಲಿಯವರೆಗೆ ಮುಂದಿನ ವಿಷಯ ಚರ್ಚೆಗೆ ತೆಗೆದುಕೊಳ್ಳಿ. ಅವರಿಗೆ ತೀರ್ಮಾನವನ್ನಾದರೂ ಮಾಡುವುದಕ್ಕೆ ಬಿಡಿ. ಎಲ್ಲವನ್ನೂ ನೀವು ಈ ಕೂಡಲೇ ಹೇಳಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ : ಅವರು ಇಲ್ಲ ಎಂದು ಹೇಳಿಬಿಟ್ಟರೆ? ಅವರು ಈಗಲೇ ತೀರ್ಮಾನ ತೆಗೆದುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳಿಲ್ಲ ಎಂದರೆ

Law and Parliamentary Affairs Minister ಇದ್ದಾರಲ್ಲವೇ? ಅವರೇ ಈಗ floor Leader, please you can take a decision.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಹಾಗೂ ಸಂಸದೀಯ ಸಚಿವರು) : ನಾನು ಒಂದು ಮಾತನ್ನು ಹೇಳಲೇ, ದಯವಿಟ್ಟು ಈ ವಿಷಯದ ಚರ್ಚೆಯನ್ನು ಮುಂದಿನ ಅಧಿವೇಶನಕ್ಕೆ ತೆಗೆದುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಇದು decision ಆಗುತ್ತದೆಯೇ?

ಶ್ರೀ ಎಸ್. ಸುರೇಶ್ ಕುಮಾರ್ : ನೀವೇ ಹೇಳಿದಿರಲ್ಲಾ? You can take a decision ಎಂದು.. .. .

ಶ್ರೀ ಸಿದ್ದರಾಮಯ್ಯ : No, No, ಯಾವುದೋ ಒಂದು ದಿನಕ್ಕಲ್ಲ, ನಾಳೆ ಸೋಮವಾರಕ್ಕೆ decision ತೆಗೆದುಕೊಳ್ಳಿ ಎಂದು ನಾನು ಹೇಳಿದ್ದು. ಅಷ್ಟೊತ್ತಿಗೆ ಈ ವಿಚಾರ ಸತ್ತೇ ಹೋಗಿರುತ್ತದೆ.

ಅಧ್ಯಕ್ಷರು : ಹಾಗೆ ಇರುತ್ತದೆ, ಅಲ್ಲಿಯವರೆಗೆ ನೀವು ಹಾಗೆಯೇ ಈ ವಿಚಾರವನ್ನು ಇರಿಸುತ್ತೀರಿ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಇಲ್ಲಿರುವ ವರದಿ ವಿಚಾರವು ಈಗಾಗಲೇ ಒಂದು ವಾರ, 15 ದಿವಸದ ಹಿಂದೆಯೇ ಲೀಕ್ ಆಗಿತ್ತು.

ಶ್ರೀ ಸಿದ್ದರಾಮಯ್ಯ : ಎಲ್ಲಾ ಲೀಕ್ ಆಗಿತ್ತು ಎನ್ನುತ್ತೀರಾ? ಅದು ಏನೇ ಇರಲಿ ಮಾನ್ಯ ಅಧ್ಯಕ್ಷರೆ, ಗಂಭೀರವಾಗಿ ನಾನು ಹೇಳುವುದೇನೆಂದರೆ, ಸದನದ ಗೌರವದಿಂದ, ಮಾನ್ಯ ಸದಸ್ಯರ ಹಕ್ಕುಗಳ ರಕ್ಷಣೆಯಾಗಬೇಕು ಎನ್ನುವ ಕಾರಣಕ್ಕೋಸ್ಕರ, ಎಲ್ಲಿಯೂ ಕೂಡ ಈ ರೀತಿ ಮತ್ತೆ ಆಗಬಾರದೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆಯೇ ಹೊರತು, I am not against any member, ಆ ಸದಸ್ಯರ ವಿರುದ್ಧ ವೈಯಕ್ತಿಕವಾಗಿ ನಮಗೇನೂ ಇಲ್ಲ.. ನಡೆಯಬಾರದು ನಡೆದಿದೆ, ಅದು ಮತ್ತೆ ಮರುಕಳಿಸಬಾರದು, ಏನಾಗುತ್ತದೆಯೆಂದರೆ ನಾವು ಲಘುವಾಗಿ ಪರಿಗಣಿಸಿದಾಗ ಮತ್ತೆ ಈ ರೀತಿ ಆಗುವ ಸಾಧ್ಯತೆಗಳಿವೆ. ಇಲ್ಲಿ ಈ ರೀತಿ ಆಗಿದೆಯೆಂದು ಗುಜರಾತಿನಲ್ಲಿಯೂ ಆಗಿ ಬಿಟ್ಟಿದೆ.

ಶ್ರೀ ಬಸವರಾಜ್ ಬೊಮ್ಮಾಯಿ : ಅಲ್ಲಿಯದು ಪ್ರೂವ್ ಆಗಿಲ್ಲ.

ಶ್ರೀ ಸಿದ್ದರಾಮಯ್ಯ : Assembly ಯಲ್ಲಿ ಗಲಾಟೆ ಆಗಿತ್ತಲ್ಲವೇ? Prove ಆಗಿಲ್ಲವೇ? ಇಲ್ಲೇ Prove ಆಗಿಲ್ಲ, ಅಲ್ಲಿ ಹೇಗೆ Prove ಆಗುತ್ತದೆ ಮಾನ್ಯ ಬಸವರಾಜು ಅವರೇ? I am very sorry, ಅಲ್ಲಿ ನಾನೇನೂ ನೋಡಿಲ್ಲ, I am not a witness to that. ಇಲ್ಲಿ ಮಾತ್ರ ಜಗಜಾಹಿರವಾಗಿ ಬಿಟ್ಟಿದೆ. ಸಾಕಷ್ಟು evidence ಇದೆ. ಆಮೇಲೆ Actually I don't know, TV ಯವರನ್ನು ಕರೆಸಿ ವಿಚಾರಣೆ ಮಾಡಿದ್ದಾರೋ, ಇಲ್ಲವೋ ಗೊತ್ತಿಲ್ಲ. Whether it is examined or not?

ಅಧ್ಯಕ್ಷರು : ವಿಚಾರಣೆ ಮಾಡಿದ್ದಾರೆ. ವಿಚಾರಣೆ ಮಾಡಿರುವ ವಿಷಯವನ್ನು ವರದಿಯ ಪುಸ್ತಕದಲ್ಲಿರುವ page No.22 ರಲ್ಲಿದೆ.

ಶ್ರೀ ಸಿದ್ದರಾಮಯ್ಯ : ಅವರನ್ನು ವಿಚಾರಣೆ ಮಾಡಿದ statement ಇಲ್ಲಿದೆಯೇ? ಅದನ್ನು ಈಗ ಓದುವುದಕ್ಕೆ ಸಮಯ ಸಾಕಾಗುವುದಿಲ್ಲ. ಆದಕಾರಣ ಸೋಮವಾರಕ್ಕೆ ಚರ್ಚೆಗೆ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಸ್ವಲ್ಪ study ಮಾಡಿಕೊಂಡು ಬರಲಿ, ಮುಂದಿನ ಅಧಿವೇಶನದಲ್ಲಿ discuss ಮಾಡೋಣ.

ಶ್ರೀ ಸಿದ್ದರಾಮಯ್ಯ : ಇವರೆಲ್ಲರೂ ಕೂಡ ಈಗಲೇ ಮುಗಿಸಬೇಕು ಎನ್ನುವ ಕಾರಣಕ್ಕೆ ಈ ರೀತಿ ಮಾತನಾಡುತ್ತಿದ್ದಾರೆ. ನಿಮ್ಮ ಮುಖಗಳನ್ನು ನೋಡಿದರೆ ಗೊತ್ತಾಗಲ್ಲವೇ?

ಶ್ರೀ ಉಮೇಶ ವಿ. ಕತ್ತಿ : Report ಇದೆ, Study ಮಾಡೋಣ, ಮುಂದಿನ ಅಧಿವೇಶನಕ್ಕೆ ಚರ್ಚೆಗೆ ತೆಗೆದುಕೊಳ್ಳೋಣ. ಆದರೂ ನೀವು ಸೋಮವಾರ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೀರಿ, ಮಾನ್ಯ ಸಭಾ ನಾಯಕರಿದ್ದಾರೆ ಅವರು ತೀರ್ಮಾನ ತೆಗೆದುಕೊಳ್ಳಲಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಓದಿಕೊಂಡು ಬರಬೇಕಲ್ಲವೇ, ಮಾನ್ಯ ಸಭಾಧ್ಯಕ್ಷರೆ, ಇವರು ನೀಡಿರುವ ವರದಿಯಲ್ಲಿ ಇನ್ನೊಬ್ಬ ಮಾನ್ಯ ಸಚಿವರು ರಾಜೀನಾಮೆ ಕೊಡುವ ಪರಿಸ್ಥಿತಿ ಇದೆ. ನಾವೇನೂ ಸಿಟ್ಟಾಗಿಲ್ಲ. ಸೋಮವಾರ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಸೋಮವಾರ ಇಟ್ಟುಕೊಳ್ಳಿ ಮಾನ್ಯ ಅಧ್ಯಕ್ಷರೆ, it is my sincere appeal to you, please take it on Monday. ಒಂದು ಸಾರಿ ಮುಗಿಸಿಬಿಡೋಣ, ಮತ್ತೆ ಹಾಗೇ ಇಡುವುದು ಬೇಡ. Let us close the Chapter. ಇದರ ಬಗ್ಗೆ ಸೋಮವಾರ ಚರ್ಚೆ ಮಾಡಿ, ಸದನ ಏನು ತೀರ್ಮಾನ ಮಾಡುತ್ತದೆಯೋ ಮಾಡಲಿ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ನೀವೆಲ್ಲರೂ ಒಂದು ತೀರ್ಮಾನ ಮಾಡಿಕೊಂಡು, ಸೋಮವಾರ ಚರ್ಚೆಗೆ ಕರೆದು ಬಿಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : Submissions of both the sides, please you take a decision, take it on Monday. ವಿಶೇಷವಾಗಿ ಇದರ ಬಗ್ಗೆ ಒಂದು ದಿವಸ ಚರ್ಚೆ ಮಾಡೋಣ.

(ಗೊಂದಲ)

ಅಧ್ಯಕ್ಷರು : ದಿನಾಂಕ: 7.2.2012 ರಂದು ವಿಧಾನಸಭಾ ಅಧಿವೇಶನದಲ್ಲಿ ಮೊಬೈಲ್ ಮೂಲಕ ಅಶ್ಲೀಲ ಚಿತ್ರಗಳನ್ನು ವೀಕ್ಷಿಸಿದರೆನ್ನಲಾದ ಹಿನ್ನೆಲೆಯಲ್ಲಿ ಪ್ರಕರಣದ ಕುರಿತಂತೆ ಸ್ವತಂತ್ರವಾಗಿ ತನಿಖೆ ನಡೆಸಲು ರಚಿಸಿದ. . . ..

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನೀವು ಏನು ಹೇಳುತ್ತಿದ್ದೀರೆಂದು ಗೊತ್ತಾಗಲಿಲ್ಲ.

(ಗೊಂದಲ)

ಅಧ್ಯಕ್ಷರು : Judgement ಕೊಡಬೇಕು ಎಂದು ತಾವು ಹೇಳಿದಿರಿ, ಅದಕ್ಕೆ ಇದನ್ನು ಓದುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಚರ್ಚೆಯಾಗಲೇ ಬೇಕು.

ಅಧ್ಯಕ್ಷರು : ನಾನು ಚರ್ಚೆ ಬಗ್ಗೆಯೇ ತೀರ್ಮಾನ ಕೊಡುತ್ತೇನೆ. ಚರ್ಚೆ close ಮಾಡುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಸೋಮವಾರ ಚರ್ಚೆಗೆ ತೆಗೆದುಕೊಂಡು ಬಿಡಿ.

ಅಧ್ಯಕ್ಷರು : ಯಾವಾಗ ಎಂದು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : ನೀವು ಸೋಮವಾರ ಎಂದು ಹೇಳುತ್ತಿದ್ದೀರಿ, ಅವರು ಮುಂದಿನ ಅಧಿವೇಶನವೆಂದು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : Coming Monday ಚರ್ಚೆಗೆ ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಈ ದಿನ ಸದನ ಸಮಿತಿಯ ಅಧ್ಯಕ್ಷರಾದ ಶ್ರೀ ಶೈಲಪ್ಪ ವಿರೂಪಾಕ್ಷಪ್ಪ ಬಿದರೂರು ಅವರು ಸದನದ ಮುಂದೆ ವರದಿಯನ್ನು ಮಂಡಿಸಿದ್ದಾರೆ. ವರದಿ ಮಂಡನೆಯಂತೆ ಸದನ ಸಮಿತಿ ರಚನೆ ಮಾಡುವಾಗ ಇರುವ ನಿರ್ಬಂಧವನ್ನು ತೆಗೆದು ಹಾಕಿದ ನಂತರ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸಭಾ ನಾಯಕರು ಈ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾಡಲೇಬೇಕೆಂದು ಹೇಳಿದರು. ಮಾನ್ಯ ವಿರೋಧ ಪಕ್ಷದ ನಾಯಕರು ಈ ಚರ್ಚೆಯನ್ನು ಮುಂದಿನ ಸೋಮವಾರವೇ ತೆಗೆದುಕೊಳ್ಳಬೇಕೆಂಬ ವಿಚಾರವನ್ನು ಮಂಡಿದ್ದಾರೆ. ಹಾಗೆಯೇ ಈ ಬಗ್ಗೆ ಮಾನ್ಯ ಸಭಾನಾಯಕರು, ಸಂಸದೀಯ ವ್ಯವಹಾರಗಳ ಸಚಿವರು ಈ ಚರ್ಚೆಯನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಈಗಾಗಲೇ Business Advisory Committee ಯ ತೀರ್ಮಾನದಂತೆ ಸದನವನ್ನು 30.4.2012 ರಂದೇ ಮುಕ್ತಾಯ ಮಾಡಬೇಕೆಂಬ ತೀರ್ಮಾನವಾಗಿರುವುದರಿಂದ, ಸದನ ಸಮಿತಿಯ ವರದಿಯನ್ನು ಮುಂದಿನ ಅಧಿವೇಶನದಲ್ಲಿ ಈ ಚರ್ಚೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ತೀರ್ಮಾನ ಮಾಡಲಾಗಿದೆ.

ಶ್ರೀ ಸಿದ್ದರಾಮಯ್ಯ : ಇದು ಸರಿಯಿಲ್ಲ ಮಾನ್ಯ ಅಧ್ಯಕ್ಷರೆ, Once again a am appealing to you, to reconsider your decision. Please take it on Monday. ಅವರು ಮುಂದಿನ ಸಾರಿ Assembly ಕರೆಯುತ್ತಾರೋ ಇಲ್ಲವೋ ಎನ್ನುವುದು ನಮಗೆ ಗ್ಯಾರಂಟಿಯಿಲ್ಲ. ಬೆಳಿಗ್ಗೆ breakfast ಒಂದು ಕಡೆ, ಊಟ ಒಂದು ಕಡೆ, ಏನೇನೋ ನಡೆಯುತ್ತಿದ್ದು, ಏನಾಗುತ್ತದೆ ಎನ್ನುವುದು ಗೊತ್ತಿಲ್ಲ. ರಾತ್ರಿ ಯಾರ ಮನೆಯಲ್ಲಿ ಊಟ ಎನ್ನುವುದು ಗೊತ್ತಿಲ್ಲ. ಮಾನ್ಯ ಅಶೋಕ್ ಅವರ ಮನೆಯಲ್ಲಿ ಎಂದೆನಿಸುತ್ತದೆ.

ಅಧ್ಯಕ್ಷರು : ನಿಮ್ಮ ಮನೆಗೆ ಬಂದಾರು.

ಡಾ: ಹೆಚ್.ಸಿ ಮಹದೇವಪ್ಪ : ಅಧಿವೇಶನ ನಡೆಯುವಾಗ ಊಟ ಕೊಡಿಸುವುದು ಒಂದು ಸಂಪ್ರದಾಯ.

ಶ್ರೀ ಸಿದ್ದರಾಮಯ್ಯ : ನೀವು ಸೋಮವಾರ ಅಧಿವೇಶನ ಕರೆಯದಿದ್ದರೆ, ನಾವು ಧರಣಿ ಮಾಡುತ್ತೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮುಂದಿನ ಅಧಿವೇಶನದಲ್ಲಿ discussion ಮಾಡೋಣ. ಸಭಾಧ್ಯಕ್ಷರು ಸರಿಯಾಗಿ ತೀರ್ಮ ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ : ನೀವು ಕರೆಯುತ್ತೀರೋ, ಏನೋ ಯಾರಿಗೆ ಗೊತ್ತಾಗುತ್ತದೆ?

ಶ್ರೀ ಜಗದೀಶ್ ಶೆಟ್ಟರ್ : ನಾವು B.A.C. meeting ನಲ್ಲಿ ನಿರ್ಣಯ ತೆಗೆದುಕೊಂಡಿದ್ದೇವೆ.

ಶ್ರೀ ಸಿದ್ದರಾಮಯ್ಯ : ಅದು ದೇವಲೋಕದ ಸಭೆ ಏನೂ ಅಲ್ಲ. ಇದನ್ನು change ಮಾಡಬಹುದು. B.A.C, meeting ಅನ್ನು ನಾಳೆ ಬೆಳಿಗ್ಗೆ ಕರೆಯಿರಿ. Change ಮಾಡಿಕೊಂಡರೆ ಆಯಿತು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ all most ಎಲ್ಲ ಶಾಸಕರು Programme fix ಮಾಡಿಕೊಂಡಿದ್ದಾರೆ. ತಮ್ಮ ತಮ್ಮ ಕ್ಷೇತ್ರಗಳಿಗೆ ಹೊರಟುಬಿಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ : ಎಲ್ಲಾ B.A.C. meeting ಪ್ರಕಾರವೇ ನಡೆದಿದೆಯೇ? ಅವತ್ತು 30ಕ್ಕೆ ಅಧಿವೇಶನ ಅಂತ್ಯಗೊಳಿಸಲು ನಾವು ತೀರ್ಮಾನ ಮಾಡಿರಲಿಲ್ಲ. ಹೋಗಲಿ ನಾಳೆ ಒಂದು ದಿನ ಅಧಿವೇಶನ ಮಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾಳೆ ಶನಿವಾರ ಒಂದು ದಿನ ಅಧಿವೇಶನ ಮಾಡಿ. ನಾಳೆ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರು ರೂಲಿಂಗ್ ಕೊಟ್ಟಿದ್ದಾರೆ, ನೋಡೋಣ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನಾಳೆ ಮಾಡಿ.

(ಗೊಂದಲ)

ಶ್ರೀ ಆರ್. ಅಶೋಕ್ : Ruling ಕೊಟ್ಟಿದೆ.

ಶ್ರೀ ಸಿದ್ದರಾಮಯ್ಯ : ನಾಳೆ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಎಂ.ಟಿ ಕೃಷ್ಣಪ್ಪ : ವರದಿಯ ಬಗ್ಗೆ ಅಧಿವೇಶನದಲ್ಲಿ ಏನು ತೀರ್ಮಾನ ತೆಗೆದುಕೊಳ್ಳುತ್ತಾರೆಂಬುದನ್ನು ಇಡೀ ರಾಜ್ಯ ಎದುರು ನೋಡುತ್ತಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಚರ್ಚೆಗೆ ಅವಕಾಶ ಕೊಡದೆ ಹೋದರೆ ಹೇಗೆ?

(ಗೊಂದಲ)

8 (2) ವರದಿಯನ್ನೊಪ್ಪಿಸುವುದು :

ಅಧ್ಯಕ್ಷರು : ಈಗ ಇನ್ನೊಂದು ವರದಿ ಇದೆ. ಭಾರತ ಸಂವಿಧಾನದ 151(2) ನೇ ಅನುಚ್ಛೇದದ ಮೇರೆಗೆ ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು 31ನೇ ಮಾರ್ಚ್ 2011 ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ರಾಜ್ಯ ಸರ್ಕಾರದ ಹಣಕಾಸು ವ್ಯವಹಾರಗಳು ಸಿವಿಲ್ 2, ಸಿವಿಲ್ 6 ಇದು ರಾಜಸ್ವ ಸ್ವೀಕೃತಿಗಳು ಹಾಗೂ ವಾಣಿಜ್ಯ ವರದಿಗಳನ್ನು ಒಪ್ಪಿಸುವುದು.

ಶ್ರಿ ಸಿದ್ದರಾಮಯ್ಯ : ಇದನ್ನು ಮುಂಚಿತವಾಗಿಯೇ ಕೊಡಬಹುದಾಗಿತ್ತು.

ಅಧ್ಯಕ್ಷರು : ನನಗೆ ನಿನ್ನೆ ಸಿಕ್ಕಿತು.

ಶ್ರೀ ಸಿದ್ದರಾಮಯ್ಯ : Atleast ಇದನ್ನು ಬೆಳಿಗ್ಗೆಯಾದರೂ ಕೊಟ್ಟಿದ್ದರೆ ಅದರ ಬಗ್ಗೆ ಏನಾದರೂ ಸ್ವಲ್ಪ ಮಾತನಾಡಬಹುದಾಗಿತ್ತು.

(ಗೊಂದಲ)

ಅಧ್ಯಕ್ಷರು : ಈಗ ಅದನ್ನು ಮಂಡಿಸಲಿ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಭಾರತ ಸಂವಿಧಾನದ 151(2) ನೇ ಅನುಚ್ಛೇದನದ ಮೇರೆಗೆ 31ನೇ ಮಾರ್ಚ್ 2011 ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಸಿವಿಲ್ 2, 6 ರಾಜ್ಯಸ್ವ ಸ್ವೀಕೃತಿಗಳು, ವಾಣಿಜ್ಯ ಹಾಗೂ ರಾಜ್ಯ ಸರ್ಕಾರದ ಹಣಕಾಸು ವ್ಯವಹಾರಗಳ ವರದಿಗಳನ್ನು ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.